**ಅ. ದಾ. ಸಂ. ಃ 269/2010**
**ಪಿ. ಡಬ್ಲ್ಯೂ ಃ 01**

**ದಿನಾಂಕ ಃ 30-10-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿಯ ಪರ ಶ್ರೀ. ಎಂ.ಎನ್ , ವಕೀಲರಿಂದ ಃ-**

**4.** ನಾನು ಮತ್ತು 1 ನೇ ಪ್ರತಿವಾದಿಯು ವಿಭಾಗದ ನಂತರ ಪ್ರತ್ಯೇಕವಾಗಿ ವಾಸಿಸುತ್ತಿದ್ದೇವೆ ಎಂದರೆ ಸರಿ. ನನ್ನ ಮತ್ತು 1 ನೇ ಪ್ರತಿವಾದಿಯ ಕುಟುಂಬದ ವ್ಯವಹಾರಗಳು ಪ್ರತ್ಯೇಕವಾಗಿ ಇದೆ ಎಂದರೆ ಸರಿ. ನಾನು 1988 ನೇ ಇಸವಿಯಿಂದ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದೇನೆ . ನನಗೆ ಇಬ್ಬರು ಮಕ್ಕಳು ಇದ್ದಾರೆ. ನನಗೆ ವಿಭಾಗದ ನಂತರ ಬೆಂಗಳೂರಿನಲ್ಲಿ ವಾಸ ಮಾಡಲು ಸ್ವಂತ ಮನೆ ಇರಲಿಲ್ಲ. ನಾನು 1998 ರ ನಂತರ ಸ್ವಂತ ಮನೆಯನ್ನು ಕಟ್ಟಿರುತ್ತೇನೆ. ಅದಕ್ಕೂ ಮೊದಲು ನಾನು ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದ್ದೇನು. ನಾನು 1988 ನೇ ಇಸವಿಯಲ್ಲಿ ರೂ. 1200 ಗಳನ್ನು ಮಾಸಿಕ ಬಾಡಿಗೆಯಾಗಿ ಕಟ್ಟಿರುತ್ತೇನೆ. 1994 ನೇ ಇಸವಿಯಿಂದ ನನ್ನ ಮಕ್ಕಳು ಕಾನ್ವೆಂಟ್ ನಲ್ಲಿ ವಿದ್ಯಾಭ್ಯಾಸವನ್ನು ಮಾಡಿರುತ್ತಾರೆ. ನಾನು ನನ್ನ ಮಕ್ಕಳಿಗೆ ಸುಮಾರು ರೂ. 10,000/- ಗಳನ್ನು ವಾಸಿಕ ಶುಲ್ಕವಾಗಿ ಶಾಲೆಗೆ ಪಾವತಿ ಮಾಡಿರುತ್ತೇನೆ. ಪುಸ್ತಕಗಳು ಮತ್ತು ಸಮವಸ್ತ್ರವನ್ನು ಕಾನ್ವೆಂಟ್ ರವರೇ ನೀಡುತ್ತಿದ್ದರು. 1988 ಇಸವಿಯಲ್ಲಿ ನನ್ನ ಮನೆಗೆ ನೀರು ಮತ್ತು ವಿದ್ಯುತ್ ಪಾವತಿಗೋಸ್ಕರ ರೂ. 1000/-ವನ್ನು ಕಟ್ಟುತ್ತಿದ್ದೇನು.

5.ನಾನು 1988 ರಿಂದ 1991 ರವರೆಗೆ ಬ್ಯಾಕ್ ವರ್ಡ್ ಕ್ಲಾಸ್ ಮತ್ತು ವೈನಾರಿಟಿಸ್ ನಲ್ಲಿ ಕೆಲಸವನ್ನು ಮಾಡಿರುತ್ತೇನೆ. ನಾನು ಅಲ್ಲಿ ಬೆರಳಚ್ಚುಗಾರರಾಗಿ ಕೆಲಸವನ್ನು ಮಾಡಿರುತ್ತೇನೆ. ಆಗ ನನಗೆ ರೂ. 2000 /- ಕ್ಕಿಂತ ಒಳಗಡೆ ಸಂಬಳ

ಬರುತ್ತಿತ್ತು. ನನ್ನ ಮನೆಯಿಂದ ನನ್ನ ಕಛೇರಿಗೆ ನಾನು ಬಸ್ಸಿನಲ್ಲಿ ಹೋಗುತ್ತಿದ್ದೇನು ಮತ್ತು ನಾನು ಬಸ್ಸಿಗಾಗಿ ಮಾಸಿಕವಾಗಿ ರೂ. 100/- ಗಳನ್ನು ಖರ್ಚು ಮಾಡುತ್ತಿದ್ದೇನು. 1993 ರಿಂದ 1997 ರವರೆಗೆ ಈ ಮೇಲೆ ಹೇಳಿರುವ ಹಾಗೆ ಎಲ್ಲಾ ವೆಚ್ಚಗಳಲ್ಲಿ ಹೆಚ್ಚಿಗೆ ಆಗುತ್ತಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು 1991 ಇಸವಿಯಲ್ಲಿ ಈ ಮೇಲೆ ಹೇಳಿರುವ ಕೆಲಸಕ್ಕೆ ರಾಜಿನಾಮೆಯನ್ನು ನೀಡಿ ಕೆ. ಎಸ್.ಎಫ್.ಸಿ ಯಲ್ಲಿ ಕೆಲಸಕ್ಕೆ ಸೇರಿಕೊಂಡಿರುವುದಾಗಿ ನುಡಿದಿರುತ್ತಾರೆ.

6. 1988 ರಿಂದ 1997 ರವರೆಗೆ ಈ ಮೇಲೆ ಹೇಳಿರುವ ಖರ್ಚುಗಳಲ್ಲಿ 15 ರಿಂದ 20% ಏರಿಕೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಜಿ. ಡಿ. ಪಿಯ ಆಧಾರದ ಮೇಲೆ ಏರಿಕೆ ಮತ್ತು ಅವರ ಸಂಬಳವು ಸಹ ಏರಿಕೆಯಾಗಿರುತ್ತದೆ ಎಂದು ನುಡಿದಿರುತ್ತಾರೆ. ಸರ್ಕಾರಿ ನೌಕರರಿಗೆ 5 ವರ್ಷ ಕ್ಕೊಮ್ಮೆ ವೇತವನ್ನು ಹೆಚ್ಚಿಸುತ್ತಾರೆ ಎಂದರೆ ಸರಿ. ಸದರಿ ವೇತನವನ್ನು 5 ರಿಂದ 10 % ಶೇಕಡದಲ್ಲಿ ಹೆಚ್ಚಿಗೆ ಮಾಡುತ್ತಾರೆ ಎಂದರೆ ಶೇಕಡ 30 ರಿಂದ 40 % ಹೆಚ್ಚಿಗೆ ಮಾಡುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ನಾನು ದಾಖಲೆಗಳನ್ನು ಸರ್ಕಾರದಿಂದ ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನಾನು 2008 ನೇ ಇಸವಿಯಲ್ಲಿ ಮನೆಯನ್ನು ಕಟ್ಟಿರುತ್ತೇನೆ. ನಿಪಿ-31 ರಿಂದ 34 ರಂತೆ ನಾನು ಪಡೆದಿರುವ ಸಾಲವು ನನ್ನ ಕುಟುಂಬದ ವ್ಯವಹಾರಕ್ಕಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸಾಲವನ್ನು ಭಾಗ ಮಾಡಿಕೊಳ್ಳುವ ಮೊದಲೇ ಪಡೆದುಕೊಳ್ಳಲಾಗಿರುತ್ತದೆ ಮತ್ತು ಒಟ್ಟು ಕುಟುಂಬಕೋಸ್ಕರ ಪಡೆದುಕೊಳ್ಳಲಾಗಿರುತ್ತದೆ ಎಂದು ನುಡಿದಿರುತ್ತಾರೆ. ನಾನು 1993-94 ರಿಂದ ಪ್ರಾವಿಡೆಂಟ್ ಫಂಡ್ ಮೇಲೆ ಸಾಲವನ್ನು ಪಡೆದುಕೊಂಡಿರುತ್ತೇನೆ. ಸದರಿ ಸಾಲವನ್ನು ನಾನು ಒಟ್ಟು ಕುಟುಂಬಕೋಸ್ಕರ ಪಡೆದುಕೊಂಡಿರುವುದಿಲ್ಲ ಮತ್ತು ನನ್ನ ವೈಯಕ್ತಿಕ ವ್ಯವಹಾರಕೋಸ್ಕರ

ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-30 ರಿಂದ 34 ನ್ನು ಈ ದಾವೆಗೋಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ, ಮಾಗಡಿ.**

**ದಿನಾಂಕ ಃ 30-10-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿಯ ಪರ ಶ್ರೀಮತಿ . ಆರ್. ಎಸ್ ಎಂ , ವಕೀಲರಿಂದ ಃ-**

2 ನೇ ಪ್ರತಿವಾದಿಯ ಪರ ವಕೀಲರು , 1 ನೇ ಪ್ರತಿವಾದಿಯ ಪರ ವಕೀಲರು ಮಾಡಿರುವ ಅಡ್ಡ ವಿಚಾರಣೆಯನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

**ಮರುವಿಚಾರಣೆ ಇಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ, ಮಾಗಡಿ.**